**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 24/2015**

**ದೋ.ಸಾ. : 35 ಪ್ರಾ.ಸಾ. : 25**

ಸಾಕ್ಷಿಯ ಹೆಸರು : ಪರಮೇಶ್ವರ ರಾಮಾ ಗುನಗಾ.
ತಂದೆಯ ಹೆಸರು : ರಾಮಾ ಗುನಗಾ.
ವಯಸ್ಸು : 63 ವರ್ಷ
ಉದ್ಯೋಗ : ನಿವೃತ್ತ ಆರಕ್ಷಕ ವೃತ್ತ ನಿರೀಕ್ಷಕರು.
ವಾಸ : ಕುಮಟಾ.

**ದಿನಾಂಕಃ 21-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು 2014 ರಿಂದ 2016 ರವರೆಗೆ ಹೊನ್ನಾವರ ಪೊಲೀಸ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 11.02.2015 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ದೋಸಾ-34 ರವರಿಂದ ಪಡೆದುಕೊಂಡು ಆವರೆಗೆ ಆದ ತನಿಖೆಯನ್ನು ಪರಿಶೀಲಿಸಿದೆ. ದಿನಾಂಕ 12.02.2015 ರಂದು ತನಿಖೆಯನ್ನು ಮುಂದುವರೆಸಿ ಗುನ್ಹಾ ಸ್ಥಳಕ್ಕೆ ಬೇಟಿ ನೀಡಿ ಪಂಚರಾದ ದೋಸಾ-2 ಮತ್ತು 3 ಇವರ ಸಮಕ್ಷಮ ದೋಸಾ-9 ರವರು ತೋರಿಸಿದ ಗುನ್ಹಾ ಸ್ಥಳವನ್ನು ಪರಿಶೀಲಿಸಿದೆ. ಆ ವೇಳೆಗೆ ಅಲ್ಲಿ ಒಂದು ನೀರಿನ ಬಾಟಲಿನಲ್ಲಿ ಸೀಮೆ ಎಣ್ಣೆ ಇತ್ತು ಮತ್ತು ಹಸಿರು ಮತ್ತು ಕೇಸರಿ ಬಣ್ಣದ ಒಂದು ರವಿಕೆ ಇತ್ತು. ಕಪ್ಪು ಚುಕ್ಕೆ ಇರುವ ಸುಟ್ಟ ನೈಟಿಯ ತುಂಡು ಒಂದು, ತಿಳಿ ಹಸಿರು ಬಣ್ಣದ ಲಂಗದ ತುಂಡು, ಬಿಳಿ ಬಣ್ಣದ ಬ್ರಾ ಒಂದು ಇದ್ದವು. ಅವುಗಳಿಂದ ಸೀಮೆ ಎಣ್ಣೆ ವಾಸನೆ ಬರುತ್ತಿತ್ತು. ಅವುಗಳನ್ನು ಪುರಾವೆಯ ಕುರಿತು ಬಿಳಿ ಪ್ಲಾಸ್ಟಿಕ್ ಕವರ್ ನಲ್ಲಿ ಅದಕ್ಕೆ ಬಿಳಿ ಬಟ್ಟೆಯಿಂದ ಪ್ರತ್ಯೇಕವಾಗಿ ಜಪ್ತು ಮಾಡಿದೆ. ಈ ಬಗ್ಗೆ ಸ್ಥಳದಲ್ಲಿ 17.00 ಗಂಟೆಯಿಂದ 18.30 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿದೆ. ಅದೇ ಕಾಲಕ್ಕೆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದೆ ಹಾಗೂ ಛಾಯಾಚಿತ್ರಗಳನ್ನು ತೆಗೆದೆ. ಈಗ ಪಂಚನಾಮೆಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿಪಿ-7 (ಡಿ) ಎಂದು ಗುರುತಿಸಲಾಯಿತು. ಈಗ ಕಚ್ಚಾ ನಕ್ಷೆಯನ್ನು

ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–11 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿಪಿ–11 (ಡಿ) ಎಂದು ಗುರುತಿಸಲಾಯಿತು. ಈಗ ನೋಡಿದ ನಿಪಿ–8 ರಿಂದ 10 ಛಾಯಾಚಿತ್ರಗಳನ್ನು ಆ ಸಮಯದಲ್ಲಿ ತೆಗೆಯಲಾಗಿರುತ್ತದೆ. ಈಗ ನ್ಯಾಯಾಲಯದಲ್ಲಿ ನೋಡಿದ ಮು.ಮಾ 1 ರಿಂದ 5 ಆಗ ಜಪ್ತು ಮಾಡಿದ ಮು.ಮಾಲು ಆಗಿದೆ. ಅವುಗಳ ಮೇಲೆ ಇರುವ ಚೀಟಿಯಲ್ಲಿ ನನ್ನ ರುಜು ಇವೆ. ಸಾಕ್ಷಿಯ ರುಜುವನ್ನು ಮು.ಮಾ 1(ಬಿ) ಯಿಂದ 5(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಅಲ್ಲಿಯೇ ಹಾಜರಿದ್ದ ದೋಸಾ–8 ಮತ್ತು 9 ರವರ ಹೇಳಿಕೆಗಳನ್ನು ಪಡೆದೆ. ದೋಸಾ–8 ನನ್ನ ಸಮಕ್ಷಮ ನಿಪಿ–12 ರಂತೆ ಹೇಳಿಕೆಯನ್ನು ನೀಡಿದ್ದಾಳೆ. ಜಪ್ತು ಮಾಡಿದ ಮು.ಮಾಲನ್ನು ಮಾಲುಪಟ್ಟಿ ಸಂಖ್ಯೆ 12/2015 ರಲ್ಲಿ ನೊಂದಾಯಿಸಿ ನ್ಯಾಯಾಲಯದ ಅನುಮತಿ ಪಡೆದೆ.

2. ನಂತರ ಅದೇ ದಿನ ಸಂಜೆ ಪುನಃ ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿದ್ದು ಆ ಕಾಲಕ್ಕೆ ದೋಸಾ–10 ರವರು ಗಾಯಾಳು ಶಬರೀನ್ ಅಬೀದ್ ಶೇಖ್ ಳ ಘಟನೆಯ ಕಾಲಕ್ಕೆ ಆಕೆಯ ಮೈಮೇಲೆ ಇದ್ದ ಬಟ್ಟೆಗಳನ್ನು ನಾನು ತೆಗೆದು ಇಟ್ಟಿದ್ದೆ ಎಂದು ಅವುಗಳನ್ನು ನನ್ನ ಮುಂದೆ ದೋಸಾ–4 ಮತ್ತು 5 ಪಂಚರ ಸಮಕ್ಷಮ ಹಾಜರುಪಡಿಸಿದ್ದು, ನಾನು ಆಗ ಪಂಚನಾಮೆ ಮಾಡಿ ಅವುಗಳನ್ನು ಜಪ್ತು ಮಾಡಿದೆ. ಈಗ ಅದನ್ನು ನೋಡಿರುತ್ತೇನೆ. ಆ ಪಂಚನಾಮೆಯನ್ನ ಈಗಾಗಲೇ ನಿಪಿ–15 ಎಂದು ಗುರುತಿಸಲಾಗಿದೆ. ಅದರಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ನಿಪಿ–15 (ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಛಾಯಾಚಿತ್ರವನ್ನು ಈಗ ನೋಡಿರುತ್ತೇನೆ. ಅದನ್ನು ಈಗಾಗಲೇ ನಿಪಿ–10 ಎಂದು ಗುರುತಿಸಲಾಗಿದೆ. ಮು.ಮಾ 6 ಮತ್ತು 7 ಅನ್ನು ಈಗ ನೋಡಿದ್ದು, ಅವು ಆಗ ಜಪ್ತು ಮಾಡಿದ ಬಟ್ಟೆಗಳೇ ಆಗಿರುತ್ತದೆ. ಅವುಗಳಿಗೆ ಅಂಟಿಸಿದ ಚೀಟಿಗಳ ಮೇಲೆ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ಮು.ಮಾ 6(ಬಿ) ಮತ್ತು 7(ಬಿ) ಎಂದು ಗುರುತಿಸಲಾಯಿತು. ಅದೇ ಕಾಲಕ್ಕೆ ಅಲ್ಲಿ ಹಾಜರಿದ್ದ ದೋಸಾ–10 ರವರ ಹೇಳಿಕೆಯನ್ನು ಪಡೆದೆ. ದೋಸಾ–10 ನನ್ನ ಮುಂದೆ ನಿಪಿ–16 ರಂತೆ ಹೇಳಿಕೆ ನೀಡಿದ್ದಾಳೆ. ಜಪ್ತು ಮಾಡಿದ ಮು.ಮಾಲನ್ನು ಮಾಲುಪಟ್ಟಿ ಸಂಖ್ಯೆ 13/2015 ರಲ್ಲಿ ನೊಂದಾಯಿಸಿ ನ್ಯಾಯಾಲಯದ ಅನುಮತಿ ಪಡೆದೆ.

3. ನಂತರ ದಿನಾಂಕ 13.02.2015 ರಂದು ಸದರಿ ಗುನ್ನಾ ಸ್ಥಳಕ್ಕೆ ಬೇಟಿ ಕೊಟ್ಟು ದೋಸಾ–11 ಮತ್ತು 12 ರವರ ಹೇಳಿಕೆಗಳನ್ನು ಪಡೆದೆ. ದೋಸಾ–11 ನನ್ನ ಸಮಕ್ಷಮ ನಿಪಿ–18 ರಂತೆ ಹೇಳಿಕೆ ಕೊಟ್ಟಿದ್ದಾಳೆ. ದೋಸಾ–12 ರವರು ನಂತರದಲ್ಲಿ ಮೃತಪಟ್ಟಿದ್ದಾರೆ. ದಿನಾಂಕ 14.02.2015 ರಂದು ಮೃತ ಶಬರೀನ್ ಳು ಹುಬ್ಬಳ್ಳಿ ಕೆ.ಎಮ್.ಸಿ ಆಸ್ಪತ್ರೆಗೆ ದಾಖಲಾದ ಬಗ್ಗೆ ವಿ ಅಂಚೆ ಮೂಲಕ ಮಾಹಿತಿ ಬಂತು. ನಮ್ಮ ಠಾಣೆಯ ದೋಸಾ–34 ಹಾಗೂ ಠಾಣಾ ಹೆಚ್ ಸಿ 1329 ರವರಿಗೆ ನೇಮಿಸಿ ಗಾಯಾಳುವನ್ನು ನೋಡಿ ಅವಳ ಹೇಳಿಕೆಯನ್ನು ಪಡೆದುಕಕೊಂಡು ಬರುವಂತೆ ಜ್ಞಾಪನಾ ನೀಡಿದೆ. ಈಗ ಆ ಜ್ಞಾಪನಾ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಜ್ಞಾಪನಾ ಪತ್ರವನ್ನು ನಿಪಿ–32 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ–32(ಎ) ಎಂದು ಗುರುತಿಸಲಾಯಿತು. ಈಗ ನಾನು ಸ್ವೀಕರಿಸಿ ವಿ ಅಂಚೆ ನೋಡಿರುತ್ತೇನೆ. ಸದರಿ ವಿ ಅಂಚೆ ಪತ್ರವನ್ನು ನಿಪಿ–33 ಎಂದು ಗುರುತಿಸಲಾಯಿತು. ದಿನಾಂಕ 15.02.2015 ರಂದು ದೋಸಾ–34 ರವರು ಮೃತ ಶಬರೀನ್ ಇತಳ ಮರಣಪೂರ್ವ ಹೇಳಿಕೆಯನ್ನು ವರದಿಯೊಂದಿಗೆ ತಂದು ಹಾಜರುಪಡಿಸಿದರು. ಈಗ ಆ ವರದಿಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ವರದಿಯನ್ನು ನಿಪಿ–34 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ–34(ಎ) ಎಂದು ಗುರುತಿಸಲಾಯಿತು. ಈಗ ನೋಡಿದ ನಿಪಿ–21 ನಾನು ಸ್ವೀಕರಿಸಿದ ಮೃತನ ಹೇಳಿಕೆ ಆಗಿದೆ.

4. ನಂತರ ದಿನಾಂಕ 18.02.2015 ರಂದು ಈ ಪ್ರಕರಣದಲ್ಲಿ ಗುನ್ನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಕೋರಿ ಲೋಕೋಪಯೋಗಿ ಇಲಾಖೆ ಹೊನ್ನಾವರರವರಿಗೆ ಪತ್ರ ಬರೆದೆ. ಅದೇ ದಿನ ಗುನ್ನಾ ಸ್ಥಳದ ದಾಖಲೆಗಳನ್ನು ಒದಗಿಸುವಂತೆ ಪಟ್ಟಣ ಪಂಚಾಯತ ಹೊನ್ನಾವರವರಿಗೆ ಕೋರಿ ಪತ್ರವನ್ನು ಬರೆದೆ. ನಂತರ ದಿನಾಂಕ 05.03.2015 ರಂದು ದೋಸಾ–1 ರವರು ಠಾಣೆಗೆ ಹಾಜರಾಗಿ ತಮ್ಮ ದೂರನ್ನು ನೀಡಿದ್ದು, ಹುಬ್ಬಳ್ಳಿಯ ಕಿ.ಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ ಹಾಗೂ ಆರೋಪಿತಳು ಅವಳಿಗೆ ಸೀಮೆ ಎಣ್ಣೆ ಹಾಕಿ ಸುಟ್ಟು ಕೊಲೆ ಮಾಡಿರುತ್ತಾರೆ ಎಂದು ಮರು ಪಿರ್ಯಾದನ್ನು ನೀಡಿದರು.ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ದೂರನ್ನು ನಿಪಿ–3 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಅದೇ

ದಿನ ಹುಬ್ಬಳ್ಳಿಯ ಕಿ.ಮ್ಸ್ ಆಸ್ಪತ್ರೆಯಿಂದ ಹುಬ್ಬಳ್ಳಿಯ ವಿದ್ಯಾನಗರ ಠಾಣೆಗೆ ಶಬರೀನ್ ಇವರು ಮೃತ ಪಟ್ಟ ಬಗ್ಗೆ ಮಾಹಿತಿ ನೀಡಿದ್ದು, ವಿದ್ಯಾನಗರ ಪೊಲೀಸ ಠಾಣೆಯವರು ನನಗೆ ಮಾಹಿತಿಯನ್ನು ವಿ ಅಂಚೆ ಮೂಲಕ ಕಳುಹಿಸಿದರು. ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪತ್ರವನ್ನು ನಿಪಿ- 35 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ- 35 (ಎ) ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಕಲಂ 302 ಅನ್ನು ಸೇರಿಸಿ ತನಿಖೆ ಕೈಗೊಳ್ಳಲು ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿದೆ. (ಅದರ ನಕಲು ಪ್ರತಿ ಕಡತದಲ್ಲಿ ಇರುವುದರಿಂದ, ಮೂಲ ಪ್ರತಿ ಇಲ್ಲದಿರುವುದರಿಂದ ಅದನ್ನು ನಿಶಾನೆ ಮಾಡಿಲ್ಲ.) ಈ ಬಗ್ಗೆ ಮಾಹಿತಿಯನ್ನು ನಾನು ದೊಸಾ–36 ರವರಿಗೆ ನೀಡಿದೆ. ಅವರು ದೂರವಾಣಿ ಮೂಲಕ ಮುಂದಿನ ತನಿಖೆಯನ್ನು ನಾನೇ ಕೈಗೊಳ್ಳುವಂತೆ ಆದೇಶ ಮಾಡಿದರು. ಕಾರಣ ಅವರು ಬೇರೆ ಕರ್ತವ್ಯದಲ್ಲಿ ತೊಡಗಿದ್ದರು. ನಂತರ ನಾನು ಹುಬ್ಬಳ್ಳಿಗೆ ಅದೇ ದಿನ ಹೋಗಿ ಕೆ.ಎಮ್ ಸಿ ಆಸ್ಪತ್ರೆಗೆ ಹೋಗಿ ಮೃತಳ ಶವದ ಪಂಚನಾಮೆ ಮಾಡುವಂತೆ ಹುಬ್ಬಳ್ಳಿಯ ತಹಶೀಲ್ದಾರರವರಿಗೆ ಕೋರಿಕೆ ಪತ್ರ ನೀಡಿದೆ. ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಕೋರಿಕೆ ಪತ್ರವನ್ನು ನಿಪಿ–36 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ–36(ಎ) ಎಂದು ಗುರುತಿಸಲಾಯಿತು. ಮಾನ್ಯ ತಹಶೀಲ್ದಾರರವರು ಬಂದು ಶವ ಪಂಚನಾಮೆಯನ್ನು ಮಾಡಿದರು. ಈಗ ಆ ಪಂಚನಾಮೆಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ– 14 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿಪಿ–14 (ಇ) ಎಂದು ಗುರುತಿಸಲಾಯಿತು. ಮೃತಳ ತಾಯಿ ದೋಸಾ–18 ರವರ ಹೇಳಿಕೆಯನ್ನು ತಹಶೀಲ್ದಾರವರಾದ ದೋಸಾ–32 ರವರು ಪಡೆದು ನನಗೆ ನೀಡಿದರು. ಅದು ನಿಪಿ–14 ರ ಭಾಗ ಆಗಿದೆ. ಮೃತಳ ಶವ ಪಂಚನಾಮೆಯನ್ನು ಮಾಡಿದ ನಂತರ ದೋಸಾ–26 ರವರ ಮೂಲಕ ವಿಭಾಗ ಮುಖ್ಯಸ್ಥರು ನ್ಯಾಯಾ ವೈದ್ಯ ಶಾಸ್ತ್ರ ಕೆ.ಎಮ್ ಸಿ ಹುಬ್ಬಳ್ಳಿರವರಿಗೆ ಕೋರಿಕೆ ಪತ್ರದೊಂದಿಗೆ ಶವವನ್ನು ಮರಣೊತ್ತರ ಪರೀಕ್ಷೆಗಾಗಿ ಕಳುಹಿಸಿದೆ. ನಂತರ ದೋಸಾ–26 ರವರು ಶವ ಪರೀಕ್ಷೆಗೆ ಮೃತದೇಹವನ್ನು ಹಾಜರುಪಡಿಸಿ ನಂತರ ಶವವನ್ನು ಮೃತಳ ತಂದೆ ದೋಸಾ– 17 ರವರ ವಶಕ್ಕೆ ನೀಡಿ ಆ ಬಗ್ಗೆ ರಶೀದಿಯನ್ನು ನನ್ನ ಮುಂದೆ ಹಾಜರುಪಡಿಸಿದರು. ಅದೇ ದಿನ ಕೆ.ಎಮ್ ಸಿ ಹುಬ್ಬಳ್ಳಿಯಲ್ಲಿ ಸಾಕ್ಷಿದಾರರಾದ

ದೋಸಾ–16 ರವರ ಹೇಳಿಕೆಯನ್ನು ಪಡೆದೆ. ದಿನಾಂಕ 13.03.2015 ರಂದು ದೋಸಾ–36 ರವರು ಠಾಣೆಗೆ ಹಾಜರಾಗಿ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದ**

5. ದಿನಾಂಕ 12.02.2015 ರಂದು ಸ್ಥಳಕ್ಕೆ ಬಂದ ಪಂಚರು ಹೊನ್ನಾವರ ಪಟ್ಟಣದವರಾಗಿದ್ದರು. ಗುನ್ನಾ ಸ್ಥಳದ ಅಕ್ಕಪಕ್ಕದಲ್ಲಿ ಮನೆಗಳು ಇವೆ. ಆ ಮನೆಗಳಲ್ಲಿ ಜನ ವಾಸ ಇದ್ದಾರೆ. ಆಕ್ಕಪಕ್ಕದಲ್ಲಿ ಇರುವ ಮನೆಯವರು ಪಂಚನಾಮೆಗೆ ಬರುವವರು ಸಿಗಲಿಲ್ಲ. ನಿಪಿ–7 ರಲ್ಲಿ ಸಹಿ ಮಾಡಿರುವ ಪಂಚರು ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ನಾನು ಗುನ್ನಾ ಸ್ಥಳದ ಪಂಚನಾಮೆ ಮಾಡಿದಾಗ ಆ ಪಂಚನಾಮೆಯಲ್ಲಿ ಹೇಳಿರುವ ವಸ್ತುಗಳನ್ನು ಗುನ್ನಾ ಸ್ಥಳದಲ್ಲಿಯೇ ಜಪ್ತು ಮಾಡಿರುತ್ತೇನೆ. ಆ ವಸ್ತುಗಳು ಮನೆಯ ಒಳಗಡೆ ಇದ್ದವು. ಆ ವಸ್ತುಗಳನ್ನು ಅಲ್ಲಿ ಹಾಜರಿದ್ದ ಸಾಕ್ಷಿದಾರರು ಜಯಾ ತೋರಿಸಿದಳು. ಸದರಿ ಸಾಕ್ಷಿಯನ್ನು ನಾನು ಕರೆಯಿಸಲಿಲ್ಲ ಅವರು ಸ್ಥಳದಲ್ಲಿಯೇ ಇದ್ದರು. ಅಲ್ಲಿ ಜಪ್ತು ಮಾಡಿದ ವಸ್ತುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ನನ್ನ ಮುಂದಿನ ತನಿಖಾಧಿಕಾರಿ ಕಳುಹಿಸಿದ್ದಾರೆ. ನಾನು ಗುನ್ನಾ ಸ್ಥಳಕ್ಕೆ ಬೇಟಿ ನೀಡದೇ ಠಾಣೆಯಲ್ಲಿಯೇ ಪಂಚನಾಮೆ ಮತ್ತು ಮು.ಮಾಲನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಹೇಳಿರುವ ಪಂಚರಿಗೆ ಪಂಚನಾಮೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದೋಸಾ–8 ರಿಂದ 10 ರವರು ನನ್ನ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಸಮಯದಲ್ಲಿ ತೆಗೆದ ಛಾಯಾಚಿತ್ರವನ್ನು ಏಕೆ ತೆಗೆಸಿದೆ ಎಂದು ಅವರಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

6. ನಾನು ಮೃತ ಶಬರೀನ್ ಳನ್ನು ಆಕೆ ಜೀವಂತ ಇದ್ದಾಗ ಬೇಟಿ ಮಾಡಿರುವುದಿಲ್ಲ. ದೂರನ್ನು ಕೊಡುವುದಕ್ಕೆ ಹಿಂದೆ ಆಕೆಯ ಸ್ಥಿತಿ ಹೇಗೆ ಇತ್ತು ಎಂದು ನನಗೆ ಮಾಹಿತಿ ಇಲ್ಲ. ಪಿರ್ಯಾದುದಾರ ದೂರನ್ನು ಕೊಡಲು ಬಂದಾಗ ನಾನು ಠಾಣೆಯಿಂದ ಹೊರಗಡೆ ಬೇರೆ ಪ್ರಕರಣದಲ್ಲಿ ತನಿಖೆಯಲ್ಲಿ ಇದ್ದೆ. ನಾನು ದೋಸಾ–11 ಮತ್ತು 12 ರವರ ಹೇಳಿಕೆಗಳನ್ನು ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ಘಟನೆ ಆದಾಗ ನಾನು ಠಾಣೆಯಲ್ಲಿ ಇರಲಿಲ್ಲ. ನಾನು ಠಾಣೆಗೆ ಬಂದ ಮೇಲೆ ಠಾಣಾಧಿಕಾರಿಯಿಂದ ಘಟನೆಯ ಬಗ್ಗೆ ಮಾಹಿತಿ ದೊರಕಿತು. ದೂರನ್ನು

ಠಾಣೆಯಲ್ಲಿ ಸ್ವೀಕರಿಸಿದ್ದ 1 ಗಂಟೆಯ ನಂತರ ನನಗೆ ಘಟನೆಯ ಬಗ್ಗೆ ಮಾಹಿತಿ ಸಿಕ್ಕಿರುತ್ತದೆ. ಆಗ ಮೃತ ಶಬರೀನ್ ಹೊನ್ನಾವರ ಆಸ್ಪತ್ರೆಯಲ್ಲಿ ದಾಖಲಾಗಿದ್ದಳು ಎಂದರೆ ಸರಿಯಲ್ಲ. ಘಟನೆಯಾದ 3 ಗಂಟೆಯ ನಂತರ ಪಿರ್ಯಾದು ದಾಖಲಾಗಿರುತ್ತದೆ. ಘಟನೆಯ ನಂತರ ನಾನು ಹೊನ್ನಾವರ ಆಸ್ಪತ್ರೆಗೆ ಏಕೆ ಬೇಟಿ ನೀಡಲಿಲ್ಲ ಎಂದರೆ ನಾನು ಠಾಣೆಯಲ್ಲಿ ಇರಲಿಲ್ಲ ಬೇರೆ ಪ್ರಕರಣದಲ್ಲಿ ತನಿಖೆಗಾಗಿ ಹೊರಗೆ ಹೋಗಿದ್ದೆ. ದೋಸಾ–34 ರವರು ದಾಖಲು ಮಾಡಿದ ಮರಣಪೂರ್ವ ಹೇಳಿಕೆ ಪ್ರಶ್ನೋತ್ತರ ರೂಪದಲ್ಲಿ ಇತ್ತು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮರಣಪೂರ್ವ ಹೇಳಿಕೆ ಮೃತಳು ನೀಡಿದ ಹೇಳಿಕೆ ಅಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆ ಮಾಡದೇ ಠಾಣೆಯಲ್ಲಿ ಕುಳಿತು ಸಾಕ್ಷಿಗಳ ಹೇಳಿಕೆಗಳನ್ನು ಪಂಚನಾಮೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡದೇ ಕಡತವನ್ನು ದೋಸಾ–36 ರವರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ